

بسم الله الرّحمٰن الرّحيم

# ಲೋಕವು ಮಹಾಯುದ್ಧದ ಕಡೆಗೆ ಸಾಗುತ್ತಿದೆ. ಅಲ್ಲಾಹನು ಲೋಕವನ್ನು ವಿನಾಶದಿಂದ ಸಂರಕ್ಷಿಸಲಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **04-12-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯವಂತನಾದ ಪ್ರೇಮಿಯಾಗಿ ಕಳುಹಿಸಿ ಇಸ್ಲಾಮ್ ಧರ್ಮದ ಪುನಶ್ಚೇತನಕ್ಕೆ ಆರಂಭ ಮಾಡಿದನು. ಹದಿನಾಲ್ಕು ನೂರು ವರ್ಷಗಳ ನಂತರ ಹೊಸದಾದ ಇಲ್‌ಹಾಮ್ ಮತ್ತು ವಹೀಗಳು ಅವತೀರ್ಣವಾಗುವ ಕಾಲದಲ್ಲಿ ಜೀವಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿ ಆ ಬೈಅತ್‌ನಿಂದ ನೇರವಾಗಿ ಅನುಗ್ರಹಗಳನ್ನು ಗಳಿಸಿದವರು ಬಹಳ ಅದೃಷ್ಟಶಾಲಿಗಳಾಗಿದ್ದರು. ಮನುಷ್ಯನು ತನ್ನ ಕಲ್ಪನೆಯ ಕಣ್ಣುಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಶಿಷ್ಯರನ್ನು, ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸುತ್ತು ಮುತ್ತಲೂ ಸೇರಿ, ತಮಗೆ ದೊರೆತ ಭಾಗ್ಯಕ್ಕೋಸ್ಕರ ಅಲ್ಲಾಹನಿಗೆ ಸ್ತುತಿಯರ್ಪಿಸುತ್ತಾ ಕೃತಜ್ಞತೆ ಅರ್ಪಿಸುತ್ತಾ ಇದ್ದರೆಂದು ಕಾಣುವಾಗ ಹೃದಯದಲ್ಲಿ ಒಂದು ಅದ್ಭುತ ಭಾವನೆ ಉಂಟಾಗುತ್ತದೆ. ಅಲ್ಲಾಹನ ವಾಗ್ದಾನ ಎಷ್ಟು ಸತ್ಯವಾಗಿ ನೆರವೇರಿತು. ಅಲ್ಲಾಹನು ಹೇಳಿದ್ದನು ಆಖರೀನ್‌ಗಳಲ್ಲಿ (ಮುಂದಿನ ಕಾಲದ ಜನರಲ್ಲಿ) ಎಂತಹ ಜನರನ್ನು ಹುಟ್ಟುವಂತೆ ಮಾಡುವೆನೆಂದರೆ ಅವರು ತಮ್ಮ ಮೊದಲಿಗಿದ್ದವರೊಂದಿಗೆ ಸೇರುವವರಾಗುವರು. ವಹೀ ಮತ್ತು ಇಲ್‌ಹಾಮ್‌ಗಳ ಹೊಸದಾದ ದೃಷ್ಟಾಂತಗಳನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ಗುಲಾಮನ ಮೂಲಕ ತೋರಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದವರ ವಿಶ್ವಾಸವನ್ನು ಅಲ್ಲಾಹನು ಬಲಪಡಿಸಿದನು. ಅವರು ಪ್ರತಿದಿನ ಬೆಳಗ್ಗೆ- 'ಈ ದಿನ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅವತೀರ್ಣವಾದ ವಹೀ ಮತ್ತು ಇಲ್‌ಹಾಮ್ ಯಾವುದು' ಎಂದು ಅನ್ವೇಷಿಸುತ್ತಿದ್ದರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮನೆಯಿಂದ ಮಸ್‌ಜಿದ್‌ಗೆ ನಮಾಝ್‌ಗಾಗಿ ಹೋದಾಗ ಕೂಡಲೆ ನಾವು ಅವರ ನೋಟ್ ಬುಕ್ಕನ್ನು ತೆರೆದು ನೋಡುತ್ತಿದ್ದೆವು – ಹೊಸದಾದ ಯಾವ ಇಲ್‌ಹಾಮ್ ಅವತೀರ್ಣವಾಗಿದೆ ಎಂದು ತಿಳಿದುಕೊಳ್ಳಲು. ಅಥವಾ ಮಸ್‌ಜಿದ್‌ಗೆ ಹೋಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಂದ ನೇರವಾಗಿ ಹೊಸ ಇಲ್‌ಹಾಮ್‌ಗಳನ್ನು ಆಲಿಸುತ್ತಿದ್ದೆವು.

ಇದು ತಮ್ಮ ವಿಶ್ವಾಸವನ್ನು ಇನ್ನಷ್ಟು ಹೊಳಪುಗೊಳಿಸಲು ಅವರಿಗಿದ್ದ ಉತ್ಸಾಹವಾಗಿತ್ತು. ಅದರ ಅನುಗ್ರಹ ಪಡೆಯಲು ಅವರು ಬಯಸುತ್ತಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವ ಭಾಗ್ಯ ದೊರೆತುದಕ್ಕೆ ಅವರು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿ ಅವನನ್ನು ಸ್ತುತಿಸುತ್ತಿದ್ದರು. ಕೆಲವು ಸಾರಿ ಹೇಗಾಗುತ್ತಿತ್ತು ಎಂದರೆ ಯಾರಾದರೊಬ್ಬ ಸಹಾಬಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೊತೆಯಲ್ಲಿದ್ದಾಗ ಇಲ್‌ಹಾಮ್ ಅವತೀರ್ಣವಾಗುತ್ತಿತ್ತು ಮತ್ತು ಆ ಸಹಾಬಿ ಸಹ ಅದನ್ನು ಆಲಿಸುವ ಭಾಗ್ಯವನ್ನು ಪಡೆಯುತ್ತಿದ್ದರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ವಹೀಯ ಬಗ್ಗೆ ನನಗೆ ನೆನಪಿದೆ. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಕಿಡ್ನಿಯಲ್ಲಿ ನೋವಿತ್ತು ಮತ್ತು ಸಯ್ಯಿದ್ ಫಝ್ಲ್ ಶಾಹ್ ಸಾಹೇಬರು ಅವರನ್ನು ನೀವುತ್ತಿದ್ದರು. ಆ ವಹೀ ಆಲಿಸುವ ಭಾಗ್ಯ ಅವರಿಗೆ ಲಭಿಸಿತು. ಆ ವಹೀ ಹೇಗಿತ್ತೆಂದರೆ ಉಚ್ಚ ಧ್ವನಿಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಾಲಗೆಯಲ್ಲಿ ಜಾರಿಯಾಗುತ್ತಿತ್ತು. ಈ ಘಟನೆ ಗೋಡೆಯ ಮೊಕದ್ದಮೆಗೆ ಸಂಬಂಧಿಸಿತ್ತು. ಮಿರ್ಝಾ ಇಮಾಮುದ್ದೀನ್ ಮೊದಲಾದವರು ಗೋಡೆ ನಿರ್ಮಿಸಿ ದಾರಿಯನ್ನು ಮುಚ್ಚಿದ್ದರು. ನ್ಯಾಯಾಲಯದಲ್ಲಿ ಮಂಡಿಸಲಾದ ದಾಖಲೆಗಳ ಪ್ರಕಾರ ಮೊಕದ್ದಮೆ ವಿರೋಧಿಗಳ ಪರವಾಗಿ ತೀರ್ಪು ಆಗುವ ಹಾಗೆ ತೋರುತ್ತಿತ್ತು. ಬೇಗನೆ ಮೊಕದ್ದಮೆ ತಳ್ಳಲ್ಪಡುವುದೆಂದು ಅವರು ಪ್ರಚಾರ ಮಾಡಿದ್ದರು. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಮುಂಚಿತವಾಗಿ ಅಲ್ಲಾಹನು ತಿಳಿಸಿದ ಹಾಗೆ ಅವರಿಗೆ ಜಯ ಲಭಿಸಿತು. ಅದು ಹೇಗೆಂದರೆ ಒಂದು ದಾಖಲೆ ಪ್ರಕಾರ ಇಮಾಮುದ್ದೀನ್ ಜೊತೆಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪಿತ ಮಿರ್ಝಾ ಗುಲಾಮ್ ಮುರ್ತಝಾ ಸಾಹೇಬರು ಸಹ ಆ ಸ್ಥಳದ ಸ್ವಾಧೀನ ಹೊಂದಿದ ಪಾಲುಗಾರರು ಎಂದು ಸಾಬೀತಾಯಿತು. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪರವಾಗಿ ಮೊಕದ್ದಮೆ ತೀರ್ಪಾಯಿತು. ಗೋಡೆಯನ್ನು ಕೆಡವಿ ಹಾಕಲಾಯಿತು. ಈ ವಹೀ ಬಹಳ ವೈಭವದಿಂದ ಈಡೇರಿತು. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅನೇಕ ಕಡೆ ಪ್ರಸ್ತಾಪಿಸಿದ್ದಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜನರೊಂದಿಗೆ ಕುಳಿತಿದ್ದಾಗ ನುಡಿದ ಮಾತುಗಳು ಈಗಲೂ ನಮ್ಮ ಕಿವಿಗಳಲ್ಲಿ ಪ್ರತಿಧ್ವನಿಸುತ್ತಿವೆ ಎಂದು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ. ಅವರು ಹೇಳುತ್ತಾರೆ: ನಾನು ವಯಸ್ಸಿನಲ್ಲಿ ಚಿಕ್ಕವನಾಗಿದ್ದರೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಜನರೊಂದಿಗೆ ಕುಳಿತಿದ್ದಾಗ ಅಲ್ಲಿ ಕುಳಿತು ಅವರ ಮಾತುಗಳು ಆಲಿಸುತ್ತಿದ್ದೆನು. ನಾವು ಆ ಸಭೆಯಲ್ಲಿ ಎಷ್ಟೋ ವಿಷಯಗಳ ಬಗ್ಗೆ ಆಲಿಸಿದ್ದೆವು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಓದುವಾಗ ನಾವು ಈ ವಿಷಯಗಳನ್ನು ಮೊದಲೇ ಆಲಿಸಿದ್ದೆವು ಎಂದು ತಿಳಿಯುತ್ತಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸ್ವಭಾವ ಹೇಗಿತ್ತೆಂದರೆ ಅವರು ಹಗಲು ಹೊತ್ತು ಬರೆದುದನ್ನು ಸಂಜೆ ಜನರ ಮುಂದಿಡುತ್ತಿದ್ದರು. ನಮಗೆ ಅವರು ಹೇಳಿದ ಮಾತುಗಳೆಲ್ಲಾ ನೆನಪಿದೆ. ನಾವು ಅವುಗಳ ಅರ್ಥ ಚೆನ್ನಾಗಿ ಗ್ರಹಿಸಿರುವೆವು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಉದ್ದೇಶಿಸುವ ಅರ್ಥ ನಮಗೆ ಮನವರಿಕೆ ಆಗಿದೆ.

ವಾಸ್ತವಿಕ ವಿಶ್ವಾಸದ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಸ್ಥಳದಲ್ಲಿ ಹೀಗೆ ಹೇಳುತ್ತಾರೆ- ನೀವು ಮಗುವನ್ನು ಆರೈಕೆ ಮಾಡುವ ಆವಶ್ಯಕತೆ ಬಗ್ಗೆ ತಾಯಿಗೆ ಸಾಕ್ಷ್ಯಾಧಾರ

ನೀಡುತ್ತಾ, ಮಗುವನ್ನು ಆರೈಕೆ ಮಾಡದಿದ್ದರೆ ಮನೆಯ ವ್ಯವಸ್ಥೆ ಹದಗೆಡುವುದು, ಹೀಗಾಗುವುದು ಹಾಗಾಗುವುದು ಎಂದೆಲ್ಲಾ ಹೇಳಿದರೂ ಆಕೆಯ ಮೇಲೆ ಅದು ಏನೇನೂ ಪರಿಣಾಮ ಬೀರಲಾರದು. ತಾಯಿಗೆ ಸಾಕ್ಷ್ಯಾಧಾರ ನೀಡಿ ಮಗುವಿನ ಸೇವೆ ಮಾಡಲು ನಿರ್ಬಂಧಿಸಲು ಸಾಧ್ಯವಿಲ್ಲ. ತಾಯಿ ಮಗುವಿಗೆ ಸೇವೆ ಸಲ್ಲಿಸುವುದು ಆಕೆಯ ಹೃದಯದಲ್ಲಿ ಇರುವ ಪ್ರೇಮಭಾವನೆಯಿಂದ ಮಾತ್ರವಾಗಿದೆ. ಇದೇ ಕಾರಣದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ. ಈಮಾನುಲ್ ಅಜಾಯಿಝ್ (ಮುದಿ ಬಲಹೀನ ಮಹಿಳೆಯರ ವಿಶ್ವಾಸದ ಹಾಗಿರುವ ವಿಶ್ವಾಸ) ಮಾತ್ರವೇ ಮನುಷ್ಯನನ್ನು ತಪ್ಪು ಮಾಡುವುದರಿಂದ ರಕ್ಷಿಸುವುದು. ಕೇವಲ ಸಾಕ್ಷ್ಯಾಧಾರವನ್ನು ಅವಲಂಬಿಸುವವರು ಹೆಜ್ಜೆ ಹೆಜ್ಜೆಗೂ ನಿಂತುಕೊಂಡು ಕೇಳುತ್ತಾರೆ– ಆ ಆಜ್ಞೆ ಏಕೆ ನೀಡಲಾಗಿದೆ. ಆ ಕೆಲಸ ಮಾಡಲು ಏಕೆ ಹೇಳಲಾಗಿದೆ ಎಂದೆಲ್ಲಾ ಕೇಳುವರು. ಅವರು ಕೆಲವು ಸಾರಿ ವಂಚನೆಗೊಳಗಾಗುತ್ತಾರೆ ಮತ್ತು ಅವರಿಗಿದ್ದ ಅಲ್ಪಸ್ವಲ್ಪ ವಿಶ್ವಾಸ ಸಹ ನಷ್ಟವಾಗುತ್ತದೆ. ಆದರೆ ಪರಿಪೂರ್ಣ ವಿಶ್ವಾಸಿಯಾಗಿರುವವನು ತನ್ನ ವಿಶ್ವಾಸವನ್ನು ತಾನು ಕಂಡು ಅನುಭವಿಸಿದ್ದರ ಮೇಲೆ ಇರಿಸುತ್ತಾನೆ. ಅವನು ಅನ್ಯರು ಹೇಳುವ ಸಾಕ್ಷ್ಯಾಧಾರ ಆಲಿಸುತ್ತಾನೆ. ಆದರೆ ಅವರ ಆಕ್ಷೇಪಗಳನ್ನು ಅಂಗೀಕರಿಸುವುದಿಲ್ಲ. ಏಕೆಂದರೆ ಅವನು ಅಲ್ಲಾಹನನ್ನು ತನ್ನ ಆಧ್ಯಾತ್ಮಿಕ ಕಣ್ಣುಗಳಿಂದ ಕಂಡಿರುತ್ತಾನೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಓರ್ವ ಸಹಾಬಿ ಮುನ್‌ಶೀ ಅರೋಡೆ ಖಾನ್ ಸಾಹೇಬ್‌ರವರ ಉದಾಹರಣೆ ನೀಡಿ ಈ ರೀತಿ ಹೇಳಿದರು: ''ಮುನ್‌ಶೀ ಅರೋಡೆ ಖಾನ್ ಸಾಹೇಬ್ ಹೇಳುತ್ತಿದ್ದರು– ನನ್ನೊಂದಿಗೆ ಕೆಲವರು ಹೇಳಿದರು: ನೀವು ಮೌಲವಿ ಸನಾಉಲ್ಲಾ ಸಾಹೇಬರ ಭಾಷಣ ಒಮ್ಮೆ ಆಲಿಸಿರಿ. ಆಗ ನಿಮಗೆ ತಿಳಿಯುವುದು ಮಿರ್ಝಾ ಸಾಹೇಬ್ ಸತ್ಯವಂತರೋ ಅಲ್ಲವೋ ಎಂದು. ನಾನು ಮೌಲವಿ ಸನಾಉಲ್ಲಾ ಸಾಹೇಬರ ಭಾಷಣ ಒಮ್ಮೆ ಆಲಿಸಿದೆ. ಜನರು ನನ್ನೊಂದಿಗೆ ಕೇಳಿದರು– ಇಷ್ಟೆಲ್ಲ ಸಾಕ್ಷ್ಯಾಧಾರಗಳನ್ನು ಆಲಿಸಿದ ನಂತರ ನೀವು ಮಿರ್ಝಾ ಸಾಹೇಬರನ್ನು ಸತ್ಯವಂತರೆಂದು ಭಾವಿಸಲು ಸಾಧ್ಯವೇ? ನಾನು ಅವರಿಗೆ ಹೇಳಿದೆ– ನಾನು ಮಿರ್ಝಾ ಸಾಹೇಬರ ಮುಖವನ್ನು ನೋಡಿದ್ದೇನೆ. ಮೌಲವಿ ಸನಾಉಲ್ಲಾ ನನ್ನ ಮುಂದೆ ಎರಡು ವರ್ಷಗಳ ಕಾಲ ಭಾಷಣ ಮಾಡಿದರೂ ಅವರ ಭಾಷಣ ನನ್ನ ಮೇಲೆ ಯಾವ ಪ್ರಭಾವವನ್ನೂ ಬೀರಲಾರದು. ಅವರ ಮುಖ ಸುಳ್ಳುಗಾರನ ಮುಖವೆಂದು ನಾನು ಹೇಳಲಾರೆ. ನಿಸ್ಸಂಶಯವಾಗಿಯೂ ಅವರ ವಿರುದ್ಧ ಮಾಡುವ ಆಕ್ಷೇಪಗಳಿಗೆ ನನಗೆ ಉತ್ತರ ತಿಳಿಯದೆ ಇದ್ದರೂ ನಾನು ಹೇಳುವೆನು– ಮಿರ್ಝಾ ಸಾಹೇಬರು ಸತ್ಯವಂತರಾಗಿದ್ದಾರೆ ಎಂದು'' ಒಟ್ಟಿನಲ್ಲಿ, ಒಬ್ಬ ಪರಿಪೂರ್ಣ ಸತ್ಯವಿಶ್ವಾಸಿಗೆ ಕಾರಣದ ತಿಳುವಳಿಕೆ ಆವಶ್ಯಕವಾಗಿಲ್ಲ. ಏಕೆಂದರೆ ಅವನ ವಿಶ್ವಾಸ ಬುದ್ಧಿಯನ್ನು ಅವಲಂಬಿಸಿರುವುದಿಲ್ಲ. ಬದಲಾಗಿ ಅವನ ವಿಶ್ವಾಸ ಅವನು ಕಂಡುಕೊಂಡ ಸತ್ಯದ ಆಧಾರದ ಮೇಲಿರುತ್ತದೆ.

ಮುನ್‌ಶೀ ಅರೋಡೆ ಖಾನ್ ಸಾಹೇಬರಿಗೆ ಸಂಬಂಧಿಸಿದ ಈ ಉಲ್ಲೇಖವು ನಮ್ಮಿಂದ ಆವಶ್ಯಪಡುವುದೇನೆಂದರೆ ನಾವು ಅಲ್ಲಾಹನನ್ನು ನಮ್ಮ ಆಧ್ಯಾತ್ಮಿಕ ಕಣ್ಣಿನಿಂದ ನೋಡಲು ಪ್ರಯತ್ನಿಸಬೇಕು. ನಾವು ಅಲ್ಲಾಹನೊಂದಿಗೆ ಸಂಬಂಧವನ್ನು ವರ್ಧಿಸುವ ಮೂಲಕವೇ ಇದು ಸಾಧ್ಯವಾಗುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅಲ್ಲಾಹನು ಈ ಕಾಲದಲ್ಲಿ ಲೋಕದ ಸುಧಾರಣೆಗಾಗಿ ಕಳುಹಿಸಿದ್ದಾನೆ. ಮತ್ತು ಅವರ ಆಗಮನ ಈ ಕಾಲಕ್ಕೆ ಆವಶ್ಯಕವಾಗಿತ್ತು ಎಂದು ನಾವು ದೃಢವಾಗಿ ನಂಬುವುದರ ಮೂಲಕ ಮಾತ್ರವೇ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸತ್ಯವಂತರೆಂಬ ದೃಢವಿಶ್ವಾಸ ನಮ್ಮಲ್ಲಿ ವಾಸ್ತವಿಕವಾಗಿ ಉಂಟಾಗಲು ಸಾಧ್ಯ. ಈ ಕಾಲಘಟ್ಟ ಅವರ ಆಗಮನವನ್ನು ಆವಶ್ಯಪಡುತ್ತಿತ್ತು. ಒಬ್ಬ ಸುಧಾರಕ, ಒಬ್ಬ ವಾಗ್ದತ್ತ ಮಸೀಹ್ ಈ ಕಾಲದಲ್ಲಿ ಬರಲೇಬೇಕಾಗಿತ್ತು. ಲೋಕದ ಇಂದಿನ ಸ್ಥಿತಿಯೇ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯಕ್ಕೆ ಸಾಕ್ಷ್ಯಾಧಾರವಾಗಿದೆ. ಇದರ ಹೊರತು ಬೇರೆ ಯಾವ ಸಾಕ್ಷ್ಯಾಧಾರದ ಆವಶ್ಯಕತೆ ಇಲ್ಲ. ಏಕೆಂದರೆ ಈ ಬಿಗಡಾಯಿಸಿದ ಕಾಲಘಟ್ಟದ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಭವಿಷ್ಯ ನುಡಿದಿದ್ದರು. ಒಟ್ಟಿನಲ್ಲಿ ಅಲ್ಲಾಹನೊಂದಿಗೆ ಸಂಬಂಧ ಬೆಳೆಸಿದ್ದರೆ ಸೃಷ್ಟಿಕರ್ತನ ಬಗ್ಗೆ ಭಯವಿರುತ್ತದೆ. ಆಗ ಅಧಿಕ ದೃಷ್ಟಾಂತಗಳ ಆವಶ್ಯಕತೆ ಇರಲಾರದು. ಸಾಕ್ಷ್ಯಾಧಾರಗಳ ಆವಶ್ಯಕತೆಯೂ ಇರುವುದಿಲ್ಲ. ಅದ್ಭುತ ಕೃತ್ಯಗಳನ್ನು ಆವಶ್ಯಪಡುವ ಅಗತ್ಯವೂ ಇರುವುದಿಲ್ಲ. ಈ ಕಾಲಘಟ್ಟದ ಆವಶ್ಯಕತೆ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೀವಿತದ ಪ್ರತಿಯೊಂದು ಕ್ಷಣ ಅವರ ಸತ್ಯತೆಗೆ ಸಾಕ್ಷ್ಯಗಳಾಗಿವೆ. ಆದುದರಿಂದ ನಾವು ಈ ವಿಷಯವನ್ನು ಯಾವಾಗಲೂ ನೆನಪಿಡಬೇಕು. ಈ ರೀತಿ ನಾವು ನಮ್ಮ ವಿಶ್ವಾಸವನ್ನು ಬಲಪಡಿಸಬೇಕು. ಈ ಕಾಲಘಟ್ಟದ ಆವಶ್ಯಕತೆ ಬಗ್ಗೆ ಇತರ ಮುಸ್ಲಿಮರೂ ಸಹ ಮನವರಿಕೆ ಮಾಡಿಕೊಳ್ಳುವಂತೆ ಅಲ್ಲಾಹನು ಮಾಡಲಿ. ಅವರು ಸಹ ಈ ಕಾಲಘಟ್ಟದ ಇಮಾಮರನ್ನು ನಂಬುವಂತಾಗಲಿ.

ಹಝ್ರತ್ ಮುನ್‌ಶೀ ಅರೋಡೆ ಖಾನ್ ಸಾಹೇಬರ ನಿಷ್ಠೆಯ ಬಗ್ಗೆ ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಮತ್ತೊಂದೆಡೆ ಹೀಗೆ ಹೇಳುತ್ತಾರೆ: ಮುನ್‌ಶೀ ಸಾಹೇಬರು ತಿಂಗಳಿಗೊಮ್ಮೆ ತಪ್ಪದೆ ಖಾದಿಯಾನಿಗೆ ಬರುತ್ತಿದ್ದರು. ಮುನ್‌ಶೀ ಸಾಹೇಬರು ಖಾದಿಯಾನಿಗೆ ಬರುವ ದಿವಸ, ಅವರು ಕೆಲಸಮಾಡುತ್ತಿದ್ದ ಕಚೇರಿಯ ಮುಖ್ಯಾಧಿಕಾರಿ ಅಲ್ಲಿನ ಗುಮಸ್ತರೊಂದಿಗೆ ಹೇಳುತ್ತಿದ್ದರು– ಈ ದಿನ ಬೇಗನೆ ಕೆಲಸ ಮುಗಿಸಬೇಕು, ಏಕೆಂದರೆ ಮುನ್‌ಶೀಜಿಯವರು ಇವತ್ತು ಖಾದಿಯಾನಿಗೆ ಹೋಗಲಿದ್ದಾರೆ. ಅವರಿಗೆ ಹೋಗಲು ಸಾಧ್ಯವಾಗದಿದ್ದರೆ ಅವರ ಹೃದಯದಿಂದ 'ನಾನು ನಾಶವಾದೆನು' ಎಂಬ ನಿರಾಶೆಯ ಶಬ್ದ ಹೊರಡುತ್ತದೆ ಎಂದು ಹೇಳುತ್ತಿದ್ದರು. ಹಾಗೆ ಕಚೇರಿಯ ಮುಖ್ಯಾಧಿಕಾರಿ ಯಾವಾಗಲೂ ನಿಗದಿತ ಸಮಯದಲ್ಲಿ ಮುನ್‌ಶೀ ಸಾಹೇಬರಿಗೆ ಹೋಗಲು ಅನುವು ಮಾಡಿಕೊಡುತ್ತಿದ್ದರು. ಆ ಅಧಿಕಾರಿ ಹಿಂದುವಾಗಿದ್ದರೂ ಮುನ್‌ಶೀ ಸಾಹೇಬರ ಭಯಭಕ್ತಿ ಮತ್ತು ಪ್ರಾರ್ಥನೆಗಳ ಅಂಗೀಕಾರಗೊಳ್ಳುವಿಕೆ ಮೊದಲಾದವುಗಳು ಆತನ ಮೇಲೆ ಬಹಳಷ್ಟು ಪ್ರಭಾವ ಬೀರಿತ್ತು. ಆದುದರಿಂದ ಅವರು ಮುನ್‌ಶೀ ಸಾಹೇಬರಿಗೆ ಖಾದಿಯಾನಿಗೆ ಹೋಗಲು ಬಿಡುವು ಕೊಡುತ್ತಿದ್ದರು. ಆ ಹಿರಿಯ ಮಾಹಾನುಭಾವರ ಪ್ರಭಾವ ಅನ್ಯರ ಮೇಲೆ ಆ ರೀತಿ ಇತ್ತು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮುಖ ನೋಡಿ ನಿಷ್ಠೆಯಲ್ಲಿ ವೃದ್ಧಿಯನ್ನು ಗಳಿಸಿದ್ದರು. ಅಲ್ಲಾಹನೊಂದಿಗೆ ಅವರಿಗೆ ಸಂಬಂಧವಿತ್ತು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಮನುಷ್ಯನು ಅಲ್ಲಾಹನೊಂದಿಗೆ ಹೇಗೆ ವರ್ತಿಸುತ್ತಾನೋ ಹಾಗೆಯೇ ಅಲ್ಲಾಹನು ಅವನೊಂದಿಗೆ ವರ್ತಿಸುತ್ತಾನೆ. ಮನುಷ್ಯನು ತನ್ನ ಹೃದಯವನ್ನು ಅಲ್ಲಾಹನಿಗೋಸ್ಕರ ಯಾವ ರೀತಿ ಕರಗಿಸುವನೋ ಹಾಗೆಯೇ ಅಲ್ಲಾಹನು ಸಹ ಅವನೊಂದಿಗೆ ವರ್ತಿಸುತ್ತಾನೆ. ಲೋಕ ಅವನಿಗೆ ಹೊಡೆಯುತ್ತದೆ, ಬೈಯ್ಯುತ್ತದೆ ಮತ್ತು ದಬ್ಬಿ ಬಿಡಲು ಪ್ರಯತ್ನಿಸುತ್ತದೆ ಆದರೆ ಪ್ರತಿಸಾರಿ ದಬ್ಬಲ್ಪಟ್ಟಾಗ ಅವನು ಚೆಂಡಿನ ಹಾಗೆ ಪುಟಿದೇಳುತ್ತಾನೆ. ಇಂತಹ

ಸತ್ಯವಿಶ್ವಾಸಿಗಳನ್ನು ಪ್ರತಿಯೊಂದು ರೀತಿಯ ಅಡ್ಡಿ ಆತಂಕಗಳಿದ್ದರೂ ಅಲ್ಲಾಹನು ಉನ್ನತಗೊಳಿಸುತ್ತಾನೆ. ಹಾಗೂ ಅದುವೇ ಅಭಿವೃದ್ಧಿ ಹೊಂದುವ ವಾಸ್ತವಿಕ ಜಮಾಅತ್ ಆಗುತ್ತದೆ. ಇಂತಹ ವಿಶ್ವಾಸವನ್ನು ಎಲ್ಲರೂ ಹೊಂದಬೇಕಾಗಿದೆ. ಆದುದರಿಂದ ನೀವು ನಿಮ್ಮ ಹೃದಯಗಳನ್ನು ಹೀಗೆಯೇ ಪರಿವರ್ತಿಸಿರಿ. ನೀವು ಜಮಾಅತ್ ಬಗ್ಗೆ ನಿಮ್ಮಲ್ಲಿ ಪ್ರೀತಿ ಹುಟ್ಟಿಸಿರಿ. ಆಗ ನೀವು ನೋಡುವಿರಿ ಜಮಾಅತ್ ಹೇಗೆ ಅಭಿವೃದ್ಧಿ ಗಳಿಸುವುದು ಎಂದು. ಯಾರು ಅಲ್ಲಾಹನದಾಗುತ್ತಾರೋ ಅವರಿಗೆ ಬೇಡುವ ಆವಶ್ಯಕತೆಯೂ ಉಂಟಾಗಲಾರದು. ಇದರ ಅರ್ಥ ಪ್ರಾರ್ಥನೆಯಲ್ಲಿ ಬೇಡುವುದಿಲ್ಲ ಎಂದು ಅರ್ಥವಲ್ಲ. ಆದರೆ ಕೆಲವು ಪರಿಪೂರ್ಣ ಸತ್ಯವಿಶ್ವಾಸಿಗಳಿಗೆ ಇಂತಹ ಸ್ಥಿತಿ ಉಂಟಾಗುತ್ತದೆ ಎಂದರ್ಥ.

ಕೆಲವರು ಹೆಮ್ಮೆಯಿಂದ ಹೇಳುತ್ತಾರೆ– ಅಲ್ಲಾಹನು ಸ್ವತಃ ನಮ್ಮ ಆವಶ್ಯಕತೆ ಈಡೇರಿಸುತ್ತಾನೆಂದು. ಆದರೆ ಈ ಸ್ಥಿತಿ ಸುಲಭವಾಗಿ ದೊರಕದು. ನೀವು ಸುಮ್ಮನೆ ಕುಳಿತುಕೊಂಡು ಹೃದಯದಲ್ಲಿ ಅಲ್ಲಾಹನ ಬಗ್ಗೆ ಪ್ರೀತಿ ಹುಟ್ಟಿಸದೆ, ನಮಾಝ್‌ನಲ್ಲಿ ಭಯಭಕ್ತಿ ಹೊಂದದೆ, ದಾನಧರ್ಮ ಮತ್ತು ಚಂದದ ವಿಷಯದಲ್ಲಿ ನಿರ್ಲಕ್ಷ್ಯರಾಗಿದ್ದರೆ, ವಂಚನೆ ಮೋಸ ಮಾಡುತ್ತಿದ್ದರೆ ಅಲ್ಲಾಹನ ಅನುಗ್ರಹಕ್ಕೆ ಪಾತ್ರರಾಗುವಿರಿ ಎಂದು ಯೋಚಿಸಬೇಡಿರಿ. ಅದು ಎಂದೂ ಆಗಲಾರದು.

ಅಲ್ಲಾಹನೊಂದಿಗೆ ಸಂಬಂಧ ಹೊಂದುವುದು ಎಂತಹ ದೃಷ್ಟಾಂತ ತೋರಿಸುತ್ತದೆ ಎನ್ನುವುದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಂದ ಆಲಿಸಿದ ಒಂದು ಘಟನೆಯನ್ನು ಹೀಗೆ ವಿವರಿಸುತ್ತಾರೆ: ಹಾರೂನ್ ರ್ರಶೀದರ ಆಡಳಿತ ಕಾಲದಲ್ಲಿ ಮೂಸಾ ರಝಾ ಎಂಬ ಒಬ್ಬರನ್ನು ಅವರು ಕಲಹ ಪಿತೂರಿಗಳಿಗೆ ಕಾರಣವಾಗುವರು ಎಂಬ ನೆವನದಿಂದ ಅವರನ್ನು ಬಂಧಿಸಿ ಜೈಲಿನಲ್ಲಿರಿಸಲಾಗಿತ್ತು. ಅವರು ಅಹ್ಲೆಬೈತ್ (ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕುಟುಂಬದವರು) ಆಗಿದ್ದರು. ಒಂದು ದಿವಸ ಮಧ್ಯರಾತ್ರಿ ಅವರನ್ನು ಬಿಡುಗಡೆಗೊಳಿಸುವ ಆಜ್ಞೆಯೊಂದಿಗೆ ಒಬ್ಬ ಸೈನಿಕ ಸೆರೆಮನೆಗೆ ಬಂದನು. ನನ್ನನ್ನು ಬಿಡುಗಡೆಗೊಳಿಸಲು ತಕ್ಷಣದ ಆಜ್ಞೆ ಹೇಗೆ ಜಾರಿಗೊಂಡಿತು ಎಂದು ಅವರು ಆಶ್ಚರ್ಯಗೊಂಡರು. ಅವರು ದೊರೆಯನ್ನು ಕಂಡು ಕೇಳಿದರು: ನೀವು ನನ್ನನ್ನು ಅಚಾನಕವಾಗಿ ಬಿಡುಗಡೆಗೊಳಿಸಲು ಕಾರಣವೇನು? ದೊರೆ ಹೀಗೆ ಹೇಳಿದರು: ನಾನು ಸ್ವಪ್ನದಲ್ಲಿ ಯಾರೋ ನನ್ನನ್ನು ನಿದ್ರೆಯಿಂದ ಎಬ್ಬಿಸಿದಂತೆ ಕಂಡೆನು. ಸ್ವಪ್ನದಲ್ಲಿ ನಾನು ಕಣ್ಣು ತೆರೆದು ಕೇಳಿದೆ– ನೀವು ಯಾರು? ಅವರು ತಾನು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಎಂದು ಹೇಳಿದರು. ನಾನು ಅವರೊಂದಿಗೆ ಕೇಳಿದೆ– ತಾವು ಏನು ಆಜ್ಞಾಪಿಸುತ್ತೀರಿ; ಅವರು ಹೇಳಿದರು– ಹಾರೂನ್ ರ್ರಶೀದ್, ನೀನು ಸುಖವಾಗಿ ನಿದ್ರಿಸುತ್ತಿರುವಿ, ನಮ್ಮ ಮಗ ಸೆರೆಮನೆಯಲ್ಲಿದ್ದಾನೆ. ಇದನ್ನು ಆಲಿಸಿ ನಾನು ಎಷ್ಟು ಭಯಭೀತನಾದನೆಂದರೆ ಕೂಡಲೇ ನಾನು ಬಿಡುಗಡೆಗೆ ಆಜ್ಞೆ ನೀಡಿದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು, ಹಝ್ರತ್ ಮುನ್‌ಶೀ ಅರೋಡೆ ಖಾನ್ ಸಾಹೇಬರ ಬಗ್ಗೆ ಇನ್ನೊಂದು ಕಡೆ ಹೀಗೆ ವಿವರಿಸಿದ್ದಾರೆ: ಮುನ್‌ಶೀ ಸಾಹೇಬರು ಪ್ರತಿ ಶುಕ್ರವಾರ ಅಥವಾ ಆದಿತ್ಯವಾರ ಖಾದಿಯಾನಿಗೆ ಬರಲು ಪ್ರಯತ್ನಿಸುತ್ತಿದ್ದರು. ರಜೆ ದೊರೆತಾಗ ಅಥವಾ ತಿಂಗಳಿಗೊಮ್ಮೆ ಖಾದಿಯಾನಿಗೆ ತಪ್ಪದೆ ಬರುತ್ತಿದ್ದರು. ಅವರು ಖಾದಿಯಾನಿಗೆ ಬರುವಾಗ ಯಾತ್ರೆಯ ಒಂದು ಭಾಗ ನಡೆದುಕೊಂಡು ಬರುತ್ತಿದ್ದರು. ಆ ಮೂಲಕ ಪ್ರಯಾಣದ ಖರ್ಚಿನಿಂದ ಒಂದು ಭಾಗ ಉಳಿತಾಯ ಮಾಡುತ್ತಿದ್ದರು ಹಾಗೂ ಅದನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಕೊಡುತ್ತಿದ್ದರು. ಆ ಕಾಲದಲ್ಲಿ ಅವರ ಸಂಬಳ ಬಹಳ ಕಡಿಮೆ ಇತ್ತು. ಅಂದಾಜು ಹದಿನೈದು ಇಪ್ಪತ್ತು ರೂಪಾಯಿಗಳು. ಅದರಲ್ಲಿ ಅವರು ತಮ್ಮ ಖರ್ಚು ವೆಚ್ಚ ನಿಭಾಯಿಸುತ್ತಿದ್ದರಲ್ಲದೆ ಪ್ರಯಾಣದ ಖರ್ಚು ಮಾಡಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಕಾಣಿಕೆ ಸಹ ನೀಡುತ್ತಿದ್ದರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಮುನ್‌ಶೀ ಸಾಹೇಬರು ತನ್ನ ಜೀವಿತ ಕಾಲದಲ್ಲಿ ಒಂದೇ ಒಂದು ಕೋಟನ್ನು ಧರಿಸುತ್ತಿದ್ದರು. ಇನ್ನೊಂದು ಕೋಟು ಧರಿಸಿದುದು ಅವರ ಜೀವಿತದಲ್ಲಿ ನಾನು ಕಾಣಲಿಲ್ಲ. ಅವರ ಇತರ ಬಟ್ಟೆಗಳು ಸಹ ಸಾಮಾನ್ಯವಾಗಿದ್ದುವು. ಅವರ ಬಹಳ ದೊಡ್ಡ ಆಶೆ ಹಣವನ್ನು ಸ್ವಲ್ಪ ಸ್ವಲ್ಪವಾಗಿ ಜಮಾಯಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಕಾಣಿಕೆಯಾಗಿ ನೀಡಬೇಕು ಎಂಬುದಾಗಿತ್ತು. ಅವರು ತನ್ನ ಹುದ್ದೆಯಲ್ಲಿ ಭಡ್ತಿ ಹೊಂದುತ್ತಾ ತಹಸಿಲ್ದಾರ್ ಆಗಿ ನೇಮಕಗೊಂಡರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು, ಮುನ್‌ಶೀ ಅರೋಡೆ ಖಾನ್ ಸಾಹೇಬರಿಗೆ ಸಂಬಂಧಿಸಿ ವಿವರಿಸಿದ ಇನ್ನೊಂದು ಪ್ರಸಿದ್ಧ ಘಟನೆ ಹೀಗಿದೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಿಧನ ಹೊಂದಿದ ನಂತರ ಒಂದು ದಿನ ಮುನ್‌ಶೀ ಸಾಹೇಬರು ಬಂದು ನನ್ನನ್ನು ಹೊರಗೆ ಕರೆದರು. ಅವರು ಒಂದೇ ಸವನೆ ಅಳುತ್ತಿದ್ದರು. ನನಗೆ ಅದರ ಕಾರಣ ತಿಳಿಯಲಿಲ್ಲ. ನಂತರ ಸಾವರಿಸಿಕೊಂಡು ಮುನ್‌ಶೀ ಸಾಹೇಬರು ಮೂರುನಾಲ್ಕು ಚಿನ್ನದ ನಾಣ್ಯಗಳನ್ನು ನನಗೆ ಕೊಟ್ಟು ಹೇಳಿದರು: ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಚಿನ್ನದ ನಾಣ್ಯಗಳನ್ನು ಕೊಡಲು ಇಚ್ಛಿಸುತ್ತಿದ್ದೆ. ಆದರೆ ನನಗೆ ಆ ಭಾಗ್ಯ ಸಿಗಲಿಲ್ಲ. ಈಗ ನನಗೆ ಆ ಭಾಗ್ಯ ದೊರೆತಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಈ ಲೋಕದಲ್ಲಿಲ್ಲ ಎಂದು ಹೇಳಿ ತೀವ್ರವಾಗಿ ಅಳಲು ಪ್ರಾರಂಭಿಸಿದರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಇದೇ ನಿಜವಾದ ಪ್ರೀತಿ ಆಗಿದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಲೌಕಿಕ ಸುಖಗಳನ್ನು ಅನುಭವಿಸುವಾಗ ಒಬ್ಬ ಯಥಾರ್ಥ ಸತ್ಯವಿಶ್ವಾಸಿಯ ಹೃದಯ ದುಃಖಭರಿತವಾಗುತ್ತದೆ. ಈ ಸುಖಗಳು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ದೊರೆಯುತ್ತಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ಅವರು ಯೋಚಿಸುತ್ತಾರೆ. ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾರಿಗೆ ಸಂಬಂಧಿಸಿ ಒಂದು ಘಟನೆ ಹೀಗಿದೆ: ಅವರಿಗೆ ಒಮ್ಮೆ ಮೃದುವಾದ ಗೋಧಿ ಹಿಟ್ಟಿನ ರೊಟ್ಟಿ ದೊರೆತಾಗ ಅವರು ಅಳುತ್ತಾ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಲ್ಲಿ ಇಂತಹ ರೊಟ್ಟಿ ಸಿಗುತ್ತಾ ಇರಲಿಲ್ಲ. ಅವರು ದಪ್ಪವಾಗಿ ಅರೆದ ಗೋಧಿ ಹಿಟ್ಟಿನ ರೊಟ್ಟಿ ತಿನ್ನುತ್ತಿದ್ದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ತನಗಿದ್ದ ಪ್ರೀತಿಯ ಬಗ್ಗೆ ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ನನಗೆ ಬೇಟೆಯಾಡುವ ಆಸಕ್ತಿ ಉಂಟಾಗಿತ್ತು. ನನ್ನ ಬಳಿ ಒಂದು ಏಯರ್‌ಗನ್ ಇತ್ತು. ಅದರ ಮೂಲಕ ಬೇಟೆಯಾಡಿ ನಾನು ಶಿಕಾರಿಗೆ ಗುರಿಯಾದುದನ್ನು ಮನೆಗೆ ತರುತ್ತಿದ್ದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಹಳ ಕಡಿಮೆ ಆಹಾರ ತಿನ್ನುತ್ತಿದ್ದರು. ನಾನು ಅವರಿಂದಲೋ ಅಥವಾ ಬೇರೆ ವೈದ್ಯರಿಂದಲೋ ಕೇಳಿ ತಿಳಿದಿದ್ದೆ– ಮೆದುಳಿನ ಶಕ್ತಿ ಬಳಸುವವರಿಗೆ ಶಿಕಾರಿ

ಮಾಂಸ ಉತ್ತಮವೆಂದು. ಆದುದರಿಂದ ನಾನು ಬೇಟೆಯಾಡಿದವುಗಳ ಮಾಂಸವನ್ನು ಅವರ ಉಪಯೋಗಕ್ಕೆ ಕೊಡುತ್ತಿದ್ದೆ. ನಾನು ನನಗೋಸ್ಕರ ಅವುಗಳನ್ನು ಉಪಯೋಗಿಸಿರುವೆನೇ ಎಂಬ ನೆನಪು ನನಗಿಲ್ಲ. ನಾನು ಯಾವಾಗಲೂ ಅದರ ಮಾಂಸ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಕೊಡುತ್ತಿದ್ದೆ. ಯಾರಿಗಾದರೂ ಒಬ್ಬರ ಬಗ್ಗೆ ಪ್ರೀತಿ ಇದ್ದರೆ ಪ್ರೀತಿಗೆ ಪಾತ್ರರಾದವರಿಗೆ ಕೊಡದೆ ಯಾರಿಗೂ ಸಂತೋಷಸಿಗಲಾರದು.

ಹುಕ್ಕವನ್ನು ಸೇದುವ ಅಭ್ಯಾಸ ಹೊಂದಿದ ಒಬ್ಬರ ಬಗ್ಗೆ ಹೀಗೆ ವರದಿಯಾಗಿದೆ. ಅವರು ಹುಕ್ಕವನ್ನು ಸೇದುತ್ತಿದ್ದರು ಮತ್ತು ನಶೆ ಬಳಸುತ್ತಿದ್ದರು. ಅವರಿಗೆ ಖಾದಿಯಾನಿನ ಉತ್ತಮ ವಾತಾವರಣದಲ್ಲಿ ಜೀವಿಸಲು ಅಸಹ್ಯವಾಯಿತು. ಅವರು ಅಲ್ಲಿಂದ ಓಡಿಹೋದರು. ಹಾಗೆ ಅವರು ಜ್ಞಾನಗಳಿಸುವುದರಿಂದ ವಂಚಿತರಾದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೊತೆ ವಾಸದಿಂದಲೂ ಅವರು ವಂಚಿತರಾದರು. ಎಲ್ಲ ನಶೆ ಪದಾರ್ಥ ಬಳಸುವವರಿಗೆ ಇದರಲ್ಲಿ ಒಂದು ಪಾಠವಿದೆ.

ಇನ್ನು ನಾನು ಲೋಕದ ಇಂದಿನ ಸ್ಥಿತಿಯ ಬಗ್ಗೆ ಸಂಕ್ಷಿಪ್ತವಾಗಿ ಹೇಳಲು ಬಯಸುತ್ತೇನೆ. ಲೋಕ ಯಾವ ವಿನಾಶದ ಕಡೆಗೆ ಸಾಗುತ್ತಿದೆಯೋ ಅದರ ಬಗ್ಗೆ ನಮ್ಮ ಜಮಾಅತಿನವರು ಪ್ರಾರ್ಥನೆಯ ಕಡೆಗೆ ಬಹಳ ಹೆಚ್ಚು ಲಕ್ಷ್ಯ ನೀಡಬೇಕು. ಇರಾಕ್ ಮತ್ತು ಸಿರಿಯಾದಲ್ಲಿರುವ ಇಸ್ಲಾಮೀ ನಾಮಧಾರಿ ಸರಕಾರಗಳ ವಿರುದ್ಧ ಫ್ರಾನ್ಸ್‌ನಲ್ಲಿ ನಡೆದ ದೌರ್ಜನ್ಯಕರ ಘಟನೆಯ ನಂತರ ಪಾಶ್ಚಿಮಾತ್ಯ ಸರಕಾರಗಳು ಕಠಿಣ ಕ್ರಮ ಜರಗಿಸಲು ತೀರ್ಮಾನಿಸಿವೆ. ವಾಯು ಸೇನೆಯ ಬಾಂಬ್ ದಾಳಿ ಪ್ರಾರಂಭವಾಗಿದೆ. ಈ ಸರಕಾರಗಳು ದಾಳಿ ನಡೆಸಲೇಬೇಕೆಂದಿದ್ದರೆ ದೌರ್ಜನ್ಯಗಾರರನ್ನು ಮಾತ್ರ ಆಕ್ರಮಿಸಬೇಕು. ಅವರು ಈ ಆಕ್ರಮಣದಿಂದ ನಿರಪರಾಧಿಗಳಾದ ಜನಸಾಮಾನ್ಯರನ್ನು ಹೊರತುಪಡಿಸಬೇಕು. ಅಲ್ಲಾಹನು ನಿರಪರಾಧಿಗಳಾದ ಜನಸಮಾನ್ಯರನ್ನು ಕಾಪಾಡಲಿ – ಆಮೀನ್. ಸಿರಿಯಾ ಮೊದಲಾದ ದೇಶಗಳಲ್ಲಿರುವವರಲ್ಲಿ ಬಹುತೇಕ ಜನರು ಬೀಸುಗಲ್ಲಿನಲ್ಲಿ ಅರೆಯಲ್ಪಡುತ್ತಿದ್ದಾರೆ. ಅವರಿಗೆ ಅತ್ತ ಕಡೆಯೂ ದಾರಿ ಇಲ್ಲ. ಇತ್ತ ಕಡೆಯೂ ದಾರಿ ಇಲ್ಲ. ನೆರೆಹೊರೆಯ ಮುಸ್ಲಿಮ್ ದೇಶಗಳು ಈ ಪಿತೂರಿಯನ್ನು ಕೊನೆಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುವುದೂ ಇಲ್ಲ. ನೆರೆಹೊರೆಯ ಮುಸ್ಲಿಮ್ ದೇಶಗಳು ಅಲ್ಲಿನ ಸರಕಾರಗಳಿಗೆ ಸಹಾಯ ನೀಡಿ ಈ ಪಿತೂರಿಯನ್ನು ಕೊನೆಗೊಳಿಸಬೇಕಿತ್ತು. ದುರದೃಷ್ಟವಶಾತ್ ಮುಸ್ಲಿಮ್ ದೇಶಗಳು ತಮ್ಮ ತಮ್ಮ ದೇಶಗಳಲ್ಲಿಯೇ ಅನ್ಯಾಯದಿಂದಲೂ ದೌರ್ಜನ್ಯದಿಂದಲೂ ವರ್ತಿಸುತ್ತಾರೆ. ಈಗ ಎಂತಹ ಕಗ್ಗಂಟಿನ ಸ್ಥಿತಿ ಇದೆ ಎಂದರೆ ಜಾಗತಿಕ ಮಹಾಯುದ್ಧದ ಸ್ಥಿತಿಯ ಹಾಗಿದೆ. ಈಗ ಇದು ಚಿಕ್ಕ ಮಟ್ಟದಲ್ಲಿದೆಯಾದರು ಮಹಾಯುದ್ಧ ಪ್ರಾರಂಭವಾಗಿದೆ ಎಂದೇ ಹೇಳಬೇಕಾಗುತ್ತದೆ. ಜಾಗತಿಕ ಯುದ್ಧ ಪ್ರಾರಂಭವಾಗಿದೆಯೆಂದು ಇಲ್ಲಿನ ಅನೇಕ ವಿಮರ್ಶಕರು ಈಗ ಒಪ್ಪಿಕೊಳ್ಳುತ್ತಿದ್ದಾರೆ ಮತ್ತು ಬರೆಯುತ್ತಲೂ ಇದ್ದಾರೆ. ಈ ವಿಷಯದ ಬಗ್ಗೆ ನಾನು ಕೆಲವು ವರ್ಷಗಳಿಂದ ಗಮನ ಸೆಳೆಯುತ್ತಾ ಇದ್ದೆ. ಈ ಜನರು ಈಗ ಇಂತಹ ಮಾತನ್ನು ಆಡಲು ಪ್ರಾರಂಭಿಸಿದ್ದಾರೆ. ಆದರೆ ಈಗಲೂ ಕಾಣುವುದೇನೆಂದರೆ ನ್ಯಾಯಪಾಲನೆ ಮಾಡುವ ಬಗ್ಗೆ ಲಕ್ಷ್ಯ ನೀಡಲಾಗುತ್ತಿಲ್ಲ. ಮಹಾಶಕ್ತಿ ರಾಷ್ಟ್ರಗಳೂ ಮುಸ್ಲಿಮ್ ದೇಶಗಳೂ ನ್ಯಾಯಪಾಲನೆ ಬಗ್ಗೆ ಗಮನ ಹರಿಸುವುದಿಲ್ಲ. ಇಸ್ಲಾಮೀ ನಾಮಧಾರಿ ಸರಕಾರದ ವಿರುದ್ಧ ಎಲ್ಲರೂ ಜೊತೆಗೂಡಿ ಕ್ರಮ ಕೈಗೊಳ್ಳುವುದಾಗಿ ಬಾಹ್ಯವಾಗಿ ಕಾಣಿಸುತ್ತದೆ. ಆದುದರಿಂದ ಅದನ್ನು ಕೊನೆಗೊಳಿಸಿದರೆ ಅಥವಾ ಕೊನೆಗೊಳಿಸಲು ಸಾಧ್ಯವಾದರೆ ಶಾಂತಿ ನೆಲೆಸುವುದು ಎಂದು ಭಾವಿಸಲಾಗುತ್ತಿದೆ. ಆದರೆ ಕೆಲವು ವಿಷಯಗಳು ಸೂಚಿಸುವುದೇನೆಂದರೆ ಈ ಪಿತೂರಿ ಕೊನೆಗೊಂಡರೂ ಲೋಕದ ಸ್ಥಿತಿಯಲ್ಲಿ ಸುಧಾರಣೆ ಆಗಲಾರದು. ಅನಂತರ ಮಹಾಶಕ್ತಿಗಳ ಪರಸ್ಪರ ಜಗ್ಗಾಟ ಪ್ರಾರಂಭವಾಗುವುದು. ಮತ್ತು ಯುದ್ಧ ಪ್ರಾರಂಭವಾಗುವುದು ವಿದೂರವಲ್ಲ. ಏಕೆಂದರೆ ರಶ್ಯ ಮತ್ತು ಇತರ ಪಾಶ್ಚಿಮಾತ್ಯ ದೇಶಗಳ ಮಧ್ಯೆ ದ್ವೇಷ ವರ್ಧಿಸುತ್ತಾ ಇದೆ. ಆಗಲೂ ಜನಸಾಮಾನ್ಯರೇ ಯುದ್ಧದಿಂದ ಹೆಚ್ಚು ಸಂಖ್ಯೆಯಲ್ಲಿ ಸಾಯುವರು. ಹಿಂದಿನ ಯುದ್ಧಗಳಲ್ಲೂ ನಾವು ಇದನ್ನೇ ಕಂಡಿದ್ದೇವೆ. ಜನಸಾಮಾನ್ಯರೇ ಕೊಲ್ಲಲ್ಪಡುತ್ತಾರೆ. ನಿರಪರಾಧಿಗಳೇ ಸಾಯುತ್ತಾರೆ. ಆದುದರಿಂದ ಬಹಳ ಹೆಚ್ಚು ಹೆಚ್ಚಾಗಿ ಪ್ರಾರ್ಥಿಸುವ ಆವಶ್ಯಕತೆ ಇದೆ. ಅಲ್ಲಾಹನು ಲೋಕವನ್ನು ವಿನಾಶದಿಂದ ರಕ್ಷಿಸಲಿ. ಅದಲ್ಲದೆ ಸುರಕ್ಷತೆಯ ಬಗ್ಗೆ ಜಾಗರೂಕತೆಯಿಂದ ಇರಲು ನಾನು ಜಮಾಅತಿನವರ ಗಮನ ಸೆಳೆದಿದ್ದೆ. ಅದರ ಬಗ್ಗೆಯೂ ಗಮನ ಹರಿಸಿರಿ. ನಾನು ಕೆಲವು ವಿಷಯಗಳ ಬಗ್ಗೆ ಸಂಕ್ಷಿಪ್ತವಾಗಿ ಸೂಚಿಸಿರುವೆನು. ನಾನು ಪುನಃ ನಿಮ್ಮ ಗಮನ ಹರಿಸಲು ಬಯಸುತ್ತೇನೆ. ನೀವು ಪ್ರಾರ್ಥನೆಯ ಕಡೆಗೆ ಹೆಚ್ಚು ಹೆಚ್ಚು ಗಮನ ಹರಿಸಿರಿ. ಅಲ್ಲಾಹನು ಸರಕಾರಗಳಿಗೂ ಶಕ್ತಿಗಳಿಗೂ ಬುದ್ಧಿ ನೀಡಲಿ. ಅವರು ಲೋಕವನ್ನು ವಿನಾಶದ ಕಡೆಗೆ ಕೊಂಡೊಯ್ಯದಿರಲಿ – ಆಮೀನ್.

—————————*****—————————


***Friday Sermon delivered by Hadrath Khaleefatul Masih Al Khamis*** *(atba)*

*at Masjid Futhuh, London on 04-12-2015.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon